ಅಧ್ಯಕ್ಷರು :- ಇಲ್ಲ, ಆ ರೀತಿಯಾಗುವುದಿಲ್ಲ, ನಾವು ಇನ್ನೂ ಮೂರು ವಾರಗಳ ಕಾಲ ಕುಳಿತುಕೊಳ್ಳುತ್ತೇವೆ, ಇದರಲ್ಲಿ ಮುಂಚಿತವಾಗಿ ನಿಮ್ಮ ಪ್ರಶ್ನೆ ಬರುವುದಕ್ಕೆ ನಾನು ವಿರ್ಪಾಡು ಮಾಡುತ್ತೇನೆ.

ಭಾಲ್ಕಿ ಪಟ್ಟಣದ ಬಸ್ ನಿಲ್ದಾಣ ಹದಗೆಟ್ಟಿರುವ ಬಗ್ಗೆ

80 (692) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿರುವ ಬಸ್ ನಿಲ್ದಾಣ ಹದಗೆಟ್ಟಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಸ್ ನಿಲ್ದಾಣದಲ್ಲಿ ರಸ್ತೆಗಳು ಹಾಳಾಗಿದ್ದು, ಪ್ರಯಾಣಿಕರ ಸೌಕರ್ಯಗಳಾದ ಆಸನಗಳು, ಶೌಚಾಲಯ, ದೀಪಗಳು ಇಲ್ಲದಿರುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು : ಮುಂದೆ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಬಸ್ ನಿಲ್ದಾಣದ ಆವರಣ ನೆಲಹಾಸು ಮಾಡುವ ಕಾಮಗಾರಿಯನ್ನು ಈಗಾಗಲೇ ರೂ. 2.18 ಲಕ್ಷಗಳ ವೆಚ್ಚದಲ್ಲಿ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.

ಬಸ್ ನಿಲ್ದಾಣದ ಆವರಣಕ್ಕೆ ರೂ. 4.05 ಲಕ್ಷಗಳ ವೆಚ್ಚದಲ್ಲಿ ಡಾಂಬರೀಕರಣ ಮಾಡಲು ಈಗಾಗಲೆ ಟೆಂಡರ್ ಕರೆಯಲಾಗಿದೆ. ಕಾಮಗಾರಿಯು ಡಿಸೆಂಬರ್ 2002 ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ. ಬಸ್ ನಿಲ್ದಾಣದಲ್ಲಿ ಶೌಚಾಲಯದ ವ್ಯವಸ್ಥೆ ಇರುತ್ತದೆ. ಹೆಚ್ಚಿನ ವಿದ್ಯುತ್ ದ್ವೀಪಗಳ ಹಾಗೂ ಹೆಚ್ಚಿನ ಆಸನಗಳ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಪ್ರಕಾಶ್ ಖಂಡ್ರೆ :- ಮಾನ್ಯ ಸಭಾಧ್ಯಕ್ಷರೆ, ಭಾಲ್ಕಿ ಬಸ್ ನಿಲ್ದಾಣದಲ್ಲಿ ಫೆಬ್ರವರಿ 2001ರಲ್ಲಿ ರಾತ್ರಿ 12.30 ಘಂಟೆಯಲ್ಲಿ ಒಂದು ರೇಪ್ ಕೇಸ್ ಆಗಿದೆ, ಇದಾಗುವುದಕ್ಕೆ ಲೈಟ್ ಇಲ್ಲದಿರುವುದು ಕಾರಣವೆಂದು ಪೊಲೀಸರು ಹೇಳಿದ್ದಾರೆ ; ಬಸ್ ನಿಲ್ದಾಣದ ಎದುರುಗಡೆಯಿಂದ ಬಂದಂತಹ ಹೆಣ್ಣುಮಕ್ಕಳನ್ನು ಎಳೆದುಕೊಂಡು ಹೋಗಿ ರೇಪ್ ಮಾಡಿದ್ದಾರೆ. ಈ ಬಸ್ ನಿಲ್ದಾಣದ ವ್ಯವಸ್ಥೆ ಹೇಗಿದೆ ಎಂದರೆ ಅಲ್ಲಿಗೆ ಯಾವ ಹೆಣ್ಣು ಮಕ್ಕಳೂ ಹೋಗುವಂತಿಲ್ಲ ; ಅಲ್ಲಿ ಲೈಟ್ ಇಲ್ಲ, ಕುರ್ಚಿಗಳಿಲ್ಲ, ಶೌಚಾಲಯವಿಲ್ಲ, ಇದನ್ನು ಹಿಂದಿನ ಸಾರಿಗೆ ಮಂತ್ರಿಗಳಾದ ಮಾನ್ಯ ಸಗೀರ್ ಅಹಮದ್‌ರವರು ನೋಡಿದ್ದಾರೆ, ಈ ಬಗ್ಗೆ ಅವರೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದರು. ಅಲ್ಲಿ ಒಂದು ಪೊಲೀಸ್ ಔಟ್ ಪೋಸ್ಟ್ ಹಾಕಬೇಕೆಂದು ನಾವು ಎರಡು ವರ್ಷಗಳಿಂದ ಬೇಡಿಕೆ ಸಲ್ಲಿಸುತ್ತಿದ್ದೇವೆ. ಆದುದರಿಂದ ಇಲ್ಲಿ ಒಂದು ಪೊಲೀಸ್ ಔಟ್ ಪೋಸ್ಟ್ ಆಗಬೇಕು ಹಾಗೂ ಬಸ್ ನಿಲ್ದಾಣದ ಪಕ್ಕದಲ್ಲಿ ಕೃಷಿ ಇಲಾಖೆಯ ಜಮೀನಿದೆ, ಅದನ್ನು ಸಾರಿಗೆ ಇಲಾಖೆಯವರು ತೆಗೆದುಕೊಳ್ಳಬೇಕೆಂದು ಹಿಂದಿನ ಸಾರಿಗೆ ಮಂತ್ರಿಗಳು ಪ್ರಸ್ತಾವನೆಯನ್ನು ಕಳುಹಿಸಿದ್ದರು ; ಆ ಪ್ರಸ್ತಾವನೆಯನ್ನು ಕೃಷಿ ಮಂತ್ರಿಗಳಿಗೆ ಕಳುಹಿಸಿ ಆ ಜಾಗವನ್ನು ತೆಗೆದುಕೊಳ್ಳಬೇಕು. ಭಾಲ್ಕಿ ಬಸ್ ನಿಲ್ದಾಣದಲ್ಲಿ ಹೆಣ್ಣು ಮಕ್ಕಳ ರೇಪ್ ಆಗುವುದು, ಅವರ ಬಂಗಾರ ಕಸಿದುಕೊಳ್ಳುವುದು ಇಂತಹ

ಪ್ರಕರಣಗಳು ಬಹಳಷ್ಟು ಆಗುತ್ತಿದೆ ಈ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳು ಏನು ಕ್ರಮ ತೆಗೆದುಕೊಳ್ಳುತ್ತಾರೆನ್ನುವ ಬಗ್ಗೆ ತಿಳಿಸಬೇಕು.

ಶ್ರೀ ಬಿ. ರಮಾನಾಥ ರೈ :- ಸನ್ಮಾನ್ಯ ಸಭಾಧ್ಯಕ್ಷರೇ, ಭಾಲ್ಕಿ ಬಸ್ ನಿಲ್ದಾಣವನ್ನು ಅಭಿವೃದ್ಧಿಪಡಿಸಬೇಕು ಎನ್ನುವ ವಿಚಾರದಲ್ಲಿ ಸರ್ಕಾರ ಗಮನ ಹರಿಸಿದೆ. ಅಲ್ಲಿ ಗಡಸು ನೆಲವನ್ನು ರಚನೆ ಮಾಡಲು ಈಗಾಗಲೇ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಅದನ್ನು ಡಾಂಬರೀಕರಣಗೊಳಿಸಲು ನಾಲ್ಕು ಲಕ್ಷ ರೂಪಾಯಿಗಳನ್ನು ನಿಗದಿಪಡಿಸಿದ್ದು, ಅದಕ್ಕೆ ಟೆಂಡರ್ ಕರೆಯಲಾಗಿದೆ. ಹೆಚ್ಚಿಗೆ ಸೋಡಿಯಂ ಲೈಟ್‌ಗಳನ್ನು ಹಾಕಲು ವ್ಯವಸ್ಥೆ ಮಾಡಿದ್ದೇವೆ. ಬಸ್ ನಿಲ್ದಾಣದಲ್ಲಿ ಶೌಚಾಲಯಗಳು ಇಲ್ಲವೆಂದು ಹೇಳಿದಿರಿ. ಆರು ಲಕ್ಷ ರೂಪಾಯಿಗಳ ವೆಚ್ಚದಲ್ಲಿ 'ಸುಲಭ್ ಶೌಚಾಲಯ'ಗಳನ್ನು ನಿರ್ಮಾಣ ಮಾಡಲು ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ನಾನು ತಿಳಿದುಕೊಂಡ ಹಾಗೆ, ಬಸ್ ನಿಲ್ದಾಣವಿರುವ ಪ್ರದೇಶದಲ್ಲಿ ಜಾಗದ ಅಭಾವವಿದೆ. ಒಂದು ಕಡೆ ಕೇಂದ್ರ ಸ್ಥಾನವಿದೆ, ಇನ್ನೊಂದು ಕಡೆ ಶಾಲೆ ಇದೆ. ಆ ಜಾಗವನ್ನು ನಾವು ತೆಗೆದುಕೊಳ್ಳಲು ಬರುವುದಿಲ್ಲ. ಇದ್ದ ಜಾಗದಲ್ಲೇ ಏನು ವ್ಯವಸ್ಥೆ ಮಾಡಬಹುದೋ ಅದನ್ನು ಮಾಡತಕ್ಕಂಥ ಪ್ರಯತ್ನವನ್ನು ನಾವು ಈಗಾಗಲೇ ಮಾಡುತ್ತಿದ್ದೇವೆ. ಅದಕ್ಕೆ ಪ್ರತ್ಯೇಕವಾದಂಥ ಸ್ಥಳವಿದೆ ಎನ್ನುವ ಬಗ್ಗೆ ಈಗ ತಾವು ಸೂಚನೆಯನ್ನು ಕೊಟ್ಟಿದ್ದೀರಿ. ಆ ಜಾಗವನ್ನು ತೆಗೆದುಕೊಂಡು ಅಭಿವೃದ್ಧಿ ಮಾಡಬಹುದು ಎನ್ನುವ ಮಾತನ್ನು ತಾವು ಹೇಳಿದಿರಿ. ಅದರ ಸಾಧಕಬಾಧಕಗಳನ್ನು ನಾವು ಪರಿಶೀಲನೆ ಮಾಡಿ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಲು ಪ್ರಯತ್ನಿಸುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ :- ಅಲ್ಲಿ ಒಂದು ಪೊಲೀಸ್ ಔಟ್‌ಪೋಸ್ಟ್ ಬೇಕಾಗಿದೆ. ಅಲ್ಲಿ ಗೂಂಡಾಗಳು ರಾತ್ರಿಯ ಹೊತ್ತು ಹೆಣ್ಣುಮಕ್ಕಳಿಗೆ ತೊಂದರೆ ಕೊಡುತ್ತಿದ್ದಾರೆ. ದಯವಿಟ್ಟು ಅದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ :- ಬಸ್ ನಿಲ್ದಾಣದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ, ಅದರಲ್ಲೂ ವಿಶೇಷವಾಗಿ ಹೆಣ್ಣುಮಕ್ಕಳಿಗೆ ತೊಂದರೆಯಾಗುತ್ತಿದೆ. ಅವರ ರಕ್ಷಣೆಯ ಸಲುವಾಗಿ ಒಂದು ಪೊಲೀಸ್ ಔಟ್‌ಪೋಸ್ಟ್ ಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ತಾವೂ ಇಲ್ಲಿ ಇದ್ದೀರಿ, ಮಾನ್ಯ ಖರ್ಗೆಯವರೂ ಇಲ್ಲೇ ಇರುವುದರಿಂದ ಅದರ ಬಗ್ಗೆ ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಮಾನಾಥ ರೈ :- ಪೊಲೀಸ್ ಔಟ್‌ಪೋಸ್ಟ್ ಕೊಡುವಂಥಾದ್ದು ಗೃಹ ಇಲಾಖೆಗೆ ಸೇರಿದಂಥ ವಿಚಾರವಾಗಿದೆ.

ಅಧ್ಯಕ್ಷರು :- ಆ ಬಗ್ಗೆ ಅವರಿಗೆ ಪತ್ರ ಬರೆಯಿರಿ.

ಬೆಂಗಳೂರಿನ ಮಹಾತ್ಮಗಾಂಧಿ ರಸ್ತೆಯಲ್ಲಿರುವ ಪಬ್ಲಿಕ್ ಯುಟಿಲಿಟಿ ಕಟ್ಟಡದಲ್ಲಿ ಸ್ವಚ್ಛತೆ ಕಾಪಾಡುವ ಬಗ್ಗೆ

81 (362) ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?